## ಇಲ್ಲಿಯವರೆಗೆ

ದಂಪತಿ ಇಬ್ಬರೂ ಹಗಲಿರುಳು ಪಟ್ಟ ಶ್ರಮ ಸಾರ್ಥಕ್ಯ ಕಂಡಿತ್ತು. ಅಂಧ ಕಾರ್ಮಿಕರಿಗೆ ಸೂರು ನಿರ್ಮಿಸಿಕೊಡಬೇಕು ಎಂಬ ಭಾವೇಶ್ ಅವರ ಕನಸು ಸಾಕಾರಗೊಂಡಿತ್ತು. ಮೋರೇಶ್ವರದಲ್ಲಿ ಹಾಸ್ಟೆಲ್ ನಿರ್ಮಾಣ ಕಾರ್ಯ ಪೂರ್ಣಗೊಂಡಿದ್ದಲ್ಲದೆ ಹಾಸ್ಟೆಲ್‌ಗೆ ಬೇಕಾದ ಕುರ್ಚಿ, ಮೇಜು, ನೀರಿನ ಟ್ಯಾಂಕ್ ಸೇರಿದಂತೆ ಅಗತ್ಯ ವಸ್ತುಗಳು ದಾನಿಗಳಿಂದ ನೆರವಿನ ರೂಪದಲ್ಲಿ ಹರಿದುಬಂದಿತ್ತು. ಇದರಿಂದ ಭಾವೇಶ್ ಅವರ ಮನೋಬಲ ಹೆಚ್ಚಿತ್ತು.



ಸುಂದರವಾಗಿ ಕಾಣುತ್ತಿದ್ದವು. ಮೋಂಬತ್ತಿಯ ಬಣ್ಣ ಕಪ್ಪಾದರೇನು, ಅದು ನೀಡುವ ಬೆಳಕು ಉಜ್ವಲವೆ ತಾನೆ. ಮೋಂಬತ್ತಿಯ ಮೂಲ ಕೆಲಸ ಬೆಳಕು ನೀಡುವುದು. ಈ ಕಪ್ಪು ಮೋಂಬತ್ತಿಗಳಿಗೆ ಆಕರ್ಷಕವಾದ ಪ್ಯಾಕೇಜಿಂಗ್ ಕೂಡಾ ಮಾಡಿದರು. ಬಹುಶಃ ಮೋಂಬತ್ತಿ ಕಾರ್ಖಾನೆಯಲ್ಲಿ ಮೊದಲ ಬಾರಿಗೆ ಕಪ್ಪು ಬಣ್ಣದ ಮೋಂಬತ್ತಿಗಳು ತಯಾರಾಗಿದ್ದವು. ಆದರೆ ಆರಂಭದಲ್ಲಿ ಈ ಮೋಂಬತ್ತಿಗಳು ಮಾರಾಟವಾಗಲೇ ಇಲ್ಲ. ಕಪ್ಪು ಬಣ್ಣದ ಬಗ್ಗೆ ಜನರಲ್ಲಿ ಪೂರ್ವಗ್ರಹವಿದೆ. ಕಪ್ಪು ಎಂದರೆ ನೆಗೆಟಿವ್ ಎನರ್ಜಿ ಎಂದ್ಯಾರೋ ಹೇಳುವಾಗ, ಲೋಹ ಲೋಹವನ್ನು ಕತ್ತರಿಸುವಂತೆ, ಕಪ್ಪು ಮೋಂಬತ್ತಿಗಳು ನೆಗೆಟಿವ್ ಎನರ್ಜಿಯನ್ನೂ ಹೊಡೆದೋಡಿಸಬಹುದಲ್ಲ ಎಂದರು. ಹಾಗೆ ಹೇಳಿದ್ದೇ ಸಾಕು, ಕಪ್ಪು ಮೋಂಬತ್ತಿಗಳು ಅಷ್ಟೂ ಮಾರಾಟವಾಗಿದ್ದವು! ಅವುಗಳಿಂದ ಯಾವ ನಕಾರಾತ್ಮಕ ಶಕ್ತಿಗಳು ಓಡಿದವೋ ಗೊತ್ತಿಲ್ಲ, ಅಂತೂ ತ್ಯಾಜ್ಯಮೇಣದ ಪುನರ್ಬಳಕೆಯ ಮಾರ್ಗ ಕಂಡಿತ್ತು. ತ್ಯಾಜ್ಯ ಹೆಚ್ಚಿದಷ್ಟೂ ಅದು ಸ್ಥಳವನ್ನು ಆವರಿಸುತ್ತದೆ, ಗುಡ್ಡೆಯಾಗುತ್ತದೆ. ಅದರಿಂದ ನಷ್ಟವೇ. ಹಾಗೆಂದೇ ತ್ಯಾಜ್ಯವನ್ನೂ ಮಾರಾಟ ಮಾಡಬಲ್ಲ ವಸ್ತುವಾಗಿ ಪರಿವರ್ತಿಸಿದ್ದರು.

* * *

ಆಗಸ್ಟ್ 2018, ಕೇರಳದಲ್ಲಿ ಜಲಪ್ರಳಯ. ಆ ದಿನ ಬೆಳಗಿನ ಸಾಮೂಹಿಕ ಪ್ರಾರ್ಥನೆಯ ನಂತರ ಅಂಧಮಿತ್ರರು ಭಾವೇಶ್ ಅವರಿಗೆ ಹೇಳಿದರು, 'ಭಾವೇಶ್ ಭಾಯಿ, ನಾವು ಒಂದು ತಿಂಗಳು ಪೂರಾ ಕಂಪನಿಯಿಂದ ಹಣ ತೆಗೆದುಕೊಳ್ಳುವುದಿಲ್ಲ'. ಏಕೆಂದು ಭಾವೇಶ್ ಅಚ್ಚರಿಯಿಂದ ಕೇಳಿದಾಗ, 'ಪ್ರತಿದಿನ ರೇಡಿಯೋದಲ್ಲಿ ಕೇಳುತ್ತಿದ್ದೇವೆ, ಕೇರಳದಲ್ಲಿ ಭಯಂಕರ ಪ್ರವಾಹ ಎಲ್ಲವನ್ನೂ ಕೊಚ್ಚಿಕೊಂಡು ಹೋಗಿದೆ. ಅಲ್ಲಿ ಅದೆಷ್ಟೋ ದಿನದಿಂದ ವಿದ್ಯುಚ್ಛಕ್ತಿ ಇಲ್ಲ. ಅವರಿಗೆ ಊಟ ತಿಂಡಿಯ ಜೊತೆಯಲ್ಲಿ ಮೋಂಬತ್ತಿಗಳೂ ಬೇಕಿವೆ. ಈ ತಿಂಗಳು ನಾವು ಉಚಿತವಾಗಿ ಕೆಲಸ ಮಾಡಿ ಆ ಪ್ರವಾಹ ಪೀಡಿತರಿಗೆ ಅತ್ಯಧಿಕ ಸಂಖ್ಯೆಯಲ್ಲಿ ಮೋಂಬತ್ತಿ ಮಾಡಿ ಕೊಡುವೆವು. ನೀವು ಕಚ್ಚಾ ಪದಾರ್ಥ ತಂದು ಕೊಡಿ ಸಾಕು' ಎಂದರು. ಅವರ ಮಾತುಗಳನ್ನು ಕೇಳಿ ಭಾವೇಶ್ ಅವರಿಗೆ ಸನರೈಸ್ ಕ್ಯಾಂಡಲ್ಸ್‌ನ ಉದ್ದೇಶ ಸಂಪೂರ್ಣ ಸಫಲವಾದ ಧನ್ಯತಾ ಭಾವ. 'ನಿಮಗೆ ಒಂದು ತಿಂಗಳ ಸಂಬಳ ಬೇಡ ಅನ್ನುತ್ತಿರುವಿರಿ. ನಿಮಗೆ ಒಂದೇ ತಿಂಗಳಲ್ಲಿ ಮೂರು ತಿಂಗಳ ಸಂಬಳ ಸಿಗಲಿ ಎನ್ನುವುದು ನನ್ನ ಆಸೆ. ನಾವೆಲ್ಲ ಈ ಕೆಲಸಕ್ಕೆ ಹಗಲು ರಾತ್ರಿ ದುಡಿಯೋಣ' ಎಂದರು. ಮರಿಕೋ ಕಂಪನಿಯ ನಿರ್ದೇಶಕರಾದ ಹರ್ಷ ಮರಿವಾಲಾ ಅವರು ಭಾವೇಶ್ ಅವರ ಈ ಅಭಿಯಾನದಲ್ಲಿ ಸಹಯೋಗ ನೀಡಿದರು. ಒಂದು ತಿಂಗಳ ಕಟು ಪರಿಶ್ರಮದಲ್ಲಿ 100 ಗಂಟೆಗಳು ಉರಿಯಬಲ್ಲ, ಒಂದು ಲಕ್ಷದಷ್ಟು ಮೋಂಬತ್ತಿಗಳನ್ನು ತಯಾರಿಸಿ ಕೇರಳದ ಪ್ರವಾಹ ಪೀಡಿತ ಜನರಿಗೆ ಕಳುಹಿಸಿಕೊಟ್ಟರು. ಸಮಾಜಕ್ಕೆ ಅಂಧರು ಕೊಡಬಲ್ಲರು ಎಂಬುದಕ್ಕೆ ಉದಾಹರಣೆಯಾದರು.

ಮುಂದೆ ಇಸವಿ 2019ರಲ್ಲಿ, ಕೃಷ್ಣಾ ನದಿಯ ಪ್ರವಾಹದಲ್ಲಿ ಪೀಡಿತವಾದ ಸಾಂಗ್ಲಿ, ಕೊಲ್ಹಾಪುರಕ್ಕೆ ಮತ್ತು ಪಾಟ್ನಾದ ಪ್ರವಾಹ ಪೀಡಿತರಿಗೂ ಮೋಂಬತ್ತಿಗಳನ್ನು ತಯಾರಿಸಿ ಕಳುಹಿಸಿಕೊಟ್ಟರು.

ಉದಾರತೆಯಿಲ್ಲದ 'ಉದಾರೀಕರಣ'ದ ಈ ದಶಕಗಳಲ್ಲಿ ಧನದ ಸಂಚಯವೇ ಯಶಸ್ಸಿನ ನಿರ್ವಚನವಾಗಿರುವಾಗ, ಭಾವೇಶ್ ಕೊಡುವುದು, ಹಂಚಿಕೊಳ್ಳುವುದು, ಜೊತೆಯಾಗಿ ಮೇಲೆ ಬರುವುದು ದಿಟವಾದ ಯಶಸ್ಸು ಎಂದು ತೋರಿಸಿದ್ದಾರೆ. ಎಲ್ಲರನ್ನು ಒಳಗೊಂಡ ಅರ್ಥಪೂರ್ಣ ಯಶಸ್ಸಿನ ಹೊಸ ನಿರ್ವಚನವನ್ನು ನೀಡಿದ್ದಾರೆ.

* * *

49 ವರ್ಷದ ಭಾವೇಶ್ ಇಂದಿಗೂ ಬೆಳಗ್ಗೆ ನಾಲ್ಕು ಗಂಟೆಯಿಂದಲೇ ತಮ್ಮ ವ್ಯಾಯಾಮವನ್ನು ಆರಂಭಿಸುತ್ತಾರೆ. ಬಹಳಷ್ಟು ರಾಷ್ಟ್ರೀಯ ಪ್ಯಾರಾಒಲಿಂಪಿಕ್ ಮತ್ತು ಇಂಡಿಯನ್ ಬ್ಲೈಂಡ್ ಸ್ಪೋರ್ಟ್ಸ್ ಅಸೋಸಿಯೇಶನ್‌ನ ಕ್ರೀಡಾಕೂಟಗಳಲ್ಲಿ ಆಡಿದ್ದಾರೆ. ಇಂದು ಅವರ ಬಳಿ ನೂರಕ್ಕೂ ಹೆಚ್ಚು ಬಹುಮಾನದ ಪದಕಗಳಿವೆ. ಧ್ಯಾನ, ಪ್ರಾಣಾಯಾಮ ಮತ್ತು ವ್ಯಾಯಾಮ ಅವರ ದೈನಂದಿಕ ಅಭ್ಯಾಸಗಳು. ನಿಯಮಿತವಾಗಿ ಇವೆಲ್ಲವನ್ನೂ ಮಾಡುವುದು ದೈಹಿಕ ಆರೋಗ್ಯ ಮತ್ತು ಮಾನಸಿಕ ಹುಮ್ಮಸ್ಸಿಗೆ ಸಹಾಯಕ ಎನ್ನುತ್ತಾರೆ. ಇಂದು ಭಾವೇಶ್ ಅನೇಕ ಪರ್ವತಗಳನ್ನು ಹತ್ತಿದ್ದಾರೆ. ಎವರೆಸ್ಟ್ ಹತ್ತುವ ಕನಸು ಅವರದು.

ಡಾ. ಕಲಿಮುಡಿ ಎಂಬ ವೈದ್ಯರು ಭಾವೇಶ್ ಅವರ ಒಳ್ಳೆಯ ಸ್ನೇಹಿತರು. ಅವರೊಮ್ಮೆ 'ಅರೆ ಭಾವೇಶ್ ಯು ರೋಮ್ಯಾನ್ಸ್ ವಿತ್ ರಿಸ್ಕ್. ನೀನು ಅಪಾಯದ ಜೊತೆಯಲ್ಲಿ ಸರಸ ಸಲ್ಲಾಪ ಮಾಡುತ್ತೀಯ' ಎಂದರು. ಭಾವೇಶ್ ನಗೆಯಾಡಿ, 'ಸರ್, ನಾನು ರಿಸ್ಕ್ ಜೊತೆಗೇ ಮದುವೆ ಮಾಡಿಕೊಂಡು ಘರ್ ಬಸಾಯ ಹೂ' ಎಂದು ನಕ್ಕಿದ್ದರು. ಅದಾಗಲೆ ಭಾವೇಶ್ ಎವರೆಸ್ಟ್ ಬೇಸ್ ಕ್ಯಾಂಪ್‌ಗೆ ಹೋಗಿ ಬಂದಿದ್ದಾರೆ. ನೇಪಾಳ ಸರಕಾರದ ಹೊಸದಾದ ನಿಯಮಗಳು ಪೂರ್ಣ ಕುರುಡರಿಗೆ ಎವರೆಸ್ಟ್ ಹತ್ತಲು ಅನುಮತಿ ಕೊಡುತ್ತಿಲ್ಲ. ಭಾವೇಶ್ ಭರವಸೆ ಕಳೆದುಕೊಂಡಿಲ್ಲ.

* * *

2016 ಸಿಹಿಕಹಿಯ ಬುತ್ತಿಯಾಗಿ ಬಂದಿತು. ದಿನಾಂಕ 8 ಮಾರ್ಚ್ 2016, ಅಂತರಾಷ್ಟ್ರೀಯ ಮಹಿಳಾ ದಿನದ ಸಂಭ್ರಮದಲ್ಲಿ ಭಾವಸಾ ಅವರು ಪತ್ನಿ ಕುಸುಮ ಅವರೊಡನೆ ಮೋರೇಶ್ವರಕ್ಕೆ ಬಂದರು. ಸುಮಾರು 200 ಜನ ಅಂಧ ಸಹೋದರ ಸಹೋದರಿಯರಿಗೆ ಧ್ಯಾನದ ಕಾರ್ಯಕ್ರಮವನ್ನು ಆಯೋಜಿಸಿದರು. ಅದರಲ್ಲಿ ಸಂಜಯ್ ದಸ್ತೂರ್ ಮತ್ತು ಅವರ ಪತ್ನಿ ಸಕ್ರಿಯವಾಗಿ ಭಾಗವಹಿಸಿದ್ದರು. ಧ್ಯಾನವಾದ ಮೇಲೆ ಭಾವಸಾ ತಾವು ಬರೆಯುತ್ತಿದ್ದ 'ಕೃತಜ್ಞ ಮೀ ಕೃತಾರ್ಥ ಮೀ' ಎಂಬ ಪುಸ್ತಕದಿಂದ ತಮ್ಮ ತಾಯಿಗೆ ಸಂಬಂಧಿಸಿದ ಪ್ರಕರಣವನ್ನು ಓದಿ ಹೇಳಿದರು. ಆ ಹೃದಯಸ್ಪರ್ಶಿ ಪ್ರಕರಣವನ್ನು ಕೇಳುತ್ತಾ ಎಲ್ಲರ ಕಣ್ಣುಗಳಲ್ಲಿ ಕಂಬನಿ ಜಿನುಗಿತ್ತು.

2016 ಮತ್ತಷ್ಟು ಪುರಸ್ಕಾರಗಳು ಭಾವೇಶ್ ಅವರನ್ನು ಕಾದಿದ್ದವು. ದಿನಾಂಕ 27 ಮಾರ್ಚ್ 2016ರಂದು ನೀತಾರೊಡನೆ ನಾಗಪುರಕ್ಕೆ ಹೋಗಿ ಮಹಾರಾಷ್ಟ್ರದ ಮುಖ್ಯಮಂತ್ರಿ ದೇವೇಂದ್ರ ಫಡ್ಣವೀಸ್ ಅವರಿಂದ 'ದಿವ್ಯಾಂಗ್ ಭೂಷಣ್ ಉದ್ಯೋಗ್ಯಕತಾ' ಪುರಸ್ಕಾರವನ್ನು ಸ್ವೀಕರಿಸಿದರು.

ಮರುದಿನ ನೀತಾ ಅವರನ್ನು ತಮ್ಮ ಗೋಂದಿಯಾ ಊರಿಗೆ ಕರೆದೊಯ್ಯಬೇಕು ಎಂದು ಯೋಜಿಸಿದ್ದರು. ಸಂತಸದ ಉತ್ತುಂಗದಲ್ಲಿದ್ದಾಗ ರಾತ್ರಿ 11.30ಕ್ಕೆ ಅಭಯ್ ಬಾಗ್ಮಾರ್ ಅವರ ಫೋನ್ ಬಂದಿತು. ಭಾವೇಶ್ ಅವರಿಗೆ ತಾವು ನಿಂತ ನೆಲ ಕುಸಿದ ಅನುಭವ. ಭಾವೇಶ್ ಮತ್ತು ನೀತಾ ಅವರಿಗೆ ತಂದೆ, ಗುರು, ಮಾರ್ಗದರ್ಶಕ ಎಲ್ಲವೂ ಆಗಿದ್ದ ಭಾವಸಾ ಅವರು ಇಹದ ಯಾತ್ರೆ ಮುಗಿಸಿ ನಡೆದುಬಿಟ್ಟಿದ್ದರು. ನಾಗಪುರದಿಂದ ಸೀದಾ ಪುಣೆಗೆ ಬಂದು ಅವರ ಅಂತಿಮ ಯಾತ್ರೆಯಲ್ಲಿ ಭಾಗವಹಿಸಿ,